ಕೇಂದ್ರ ಸರ್ಕಾರವು ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಎಂಬ ಕಾಯ್ದೆಯನ್ನು ಜಾರಿಗೆ ತಂದಿದೆ

ಗುರುತಿಸಲಾಗಿರುವ ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದನ್ನು ನಿಷೇದಿಸಲಾಗಿರುತ್ತದೆ ಅಲ್ಲದೇ ಭಾರತ ಸಂವಿಧಾನದ ಪರಿಚ್ಛೇದ 24ರನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ ಮತ್ತು ಇತರೆ ಅಪಾಯಕಾರಿ ಕೆಲಸ ಗಳಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿರುತ್ತದೆ ಕಾನೂನು ಉಲ್ಲಂಘಿಸಿದವರ ವಿರುದ್ಧ ದಂಡವನ್ನು ವಿಧಿಸಲಾಗುತ್ತದೆ.

8(58) ಶ್ರೀ ಬಾಲಕೃಷ್ಣ.ಸಿ.ಎನ್.(ಶ್ರವಣಬೆಳಗೊಳ) ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ವಿವಿಧ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ತಾಲೂಕುವಾರು ಸಂಖ್ಯಾ ವಿವರಗಳೇನು?

ಆ) ಕಳೆದ ಎರಡು ವರ್ಷಗಳಲ್ಲಿ ಯೋಜನಾ ಸೌಲಭ್ಯವನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಬಂದ ಒಟ್ಟು ಅರ್ಜಿಗಳೆಷ್ಟು, ಮತ್ತು ಮಂಜೂರಾತಿಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು,

ಇ) ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಲು ಅರ್ಹ ಫಲಾನುಭವಿಗಳಿಗೆ ವಿಳಂಬವಿಲ್ಲದೆ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ತಾಲ್ಲೂಕುವಾರು ವಿವರಗಳನ್ನು ಅನು+ಬಂಧ–1 ರಲ್ಲಿ ಲಗತ್ತಿಸಲಾಗಿದೆ

ಆ)

ವರ್ಷ	ಸ್ವೀಕೃತವಾದ ಅರ್ಜಿಗಳ ಸಂ	ಮಂಜೂರಾದ ಅರ್ಜಿಗಳ ಸಂ.	ಬಾಕಿ
2012–13	16976	16976	0
2013–14	31856	27901	3955

ಇ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಾದ ಸಂಧ್ಯಾ ಸುರಕ್ಷಾ ಯೋಜನೆ, ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ನಿರ್ಗತಿಕ ವಿಧವಾ ವೇತನ ಮತ್ತು ಅಂಗವಿಕಲ ವೇತನಗಳನ್ನು ಸಕಾಲ ಯೋಜನೆಯಡಿ ತರಲಾಗಿದ್ದು, ಅರ್ಜಿ ಸ್ವೀಕೃತವಾದ 70 ದಿನಗಳೊಳಗಾಗಿ ಮಂಜೂರು ಮಾಡಲಾಗುತ್ತಿದೆ. ನೂತನ ಯೋಜನೆಗಳಾದ ಮನಸ್ವಿನಿ ಮತ್ತು ಮೈತ್ರಿ ಯೋಜನೆಗಳಡಿ ಅರ್ಜಿ ಸ್ವೀಕೃತವಾದ ಒಂದು ತಿಂಗಳೊಳಗೆ ಮಂಜೂರು ಮಾಡಲು ಸರ್ಕಾರ ಆದೇಶಿಸಿದೆ.

ಹಾಸನ ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳ ತಾಲ್ಲೂಕುವಾರು – ವಿವರಗಳು

ಅನುಬಂಧ–1

ಕ್ರ.ಸಂ	ತಾಲ್ಲೂಕು	ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ (ಶೇ 40)	ಅಂಗವಿಕಲ ವೇತನ (ಶೇ.75)	ಸಂಧ್ಯಾ ಸುರಕ್ಷಾ ಯೋಜನೆ
1	ಅಲೂರು	2286	3599	991	308	3470
2	ಅರಸೀಕರೆ	8382	9380	2922	496	9537

3	ಅರಕಲಗೂಡು	3129	6884	2032	1176	5711
4	ಬೇಲೂರು	5220	4135	1635	125	3734
5.	ಸಿ ಆರ್ ಪಟ್ಟಣ್ಣ	9669	10385	3363	769	9633
6	ಹಾಸನ	18076	10668	4363	330	8459
7	ಹೆಚ್.ಎನ್ ಪುರ	5734	5585	2064	650	5945
8	ಸಕಲೇಶಪುರ	1509	4156	960	504	2100
	ಒಟ್ಟು	**54005**	**54792**	**18330**	**5448**	**48589**

ಸಣ್ಣ ನೀರಾವರಿ ಯೋಜನೆಗಳು

9(59) ಶ್ರೀ ಬಾಲಕೃಷ್ಣ ಸಿ.ಎನ್ (ಮಾಗಡಿ) :ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೂಳಿಸಲಾಗಿರುವ ಸಣ್ಣ ನೀರಾವರಿಯ ವಿವಿಧ ಯೋಜನೆಗಳು ಮತ್ತು ಅವುಗಳಿಗಾಗಿ ಮಂಜೂರಾದ ಖರ್ಚುವೆಚ್ಚಗಳ ವಿವರಗಳೇನು;

ಆ) ಈ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಕೆರೆಗಳು ಮತ್ತು ಜಲಸಂಪನ್ಮೂಲಗಳ ತಾಲ್ಲೂಕುವಾರು ವಿವರಗಳೇನು,

ಇ) ಈ ಜಿಲ್ಲೆಯಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರದ ಕ್ರಿಯಾ ಯೋಜನೆಗಳೇನು; ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟ ಮೊತ್ತದ ವಿವರಗಳೇನು?

ಶ್ರೀ ಶಿವರಾಜ್ ಎಸ್ ತಂಗಡಗಿ (ಸಣ್ಣ ನೀರಾವರಿ ಸಚಿವರು)

ಅ) ವಿವರಗಳ ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರಗಳ ಅನುಬಂಧ–1ರಲ್ಲಿ ನೀಡಲಾಗಿದೆ.

ಇ) 2013–14ನೇ ಸಾಲಿನ ಕ್ರಿಯಾ ಯೋಜನೆ ಪರಿಶಿಲನೆಯಲ್ಲಿದೆ